**ದಿನಾಂಕ 30.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಕೆ.ಜಿ.ಪಿ. ವಕೀಲರಿಂದಃ–**

ನನಗೆ ಈಗ 35 ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆ ಬೊಮಣ್ಣ ಅಂದರೆ 1 ನೇ ವಾದಿಗೆ ಈಗ ಸುಮಾರು 55 ವರ್ಷ ಇರಬಹುದು. ನನ್ನ ತಂದೆಗೆ 17 ರಿಂದ 18 ವರ್ಷವಿದ್ದಾಗಲೇ ಬೀರೂರಿಗೆ ಬಂದು ನೆಲೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ನಾನೇ ಹಿರಿಯ ಮಗ ಎಂದರೆ ಸರಿ. ನಾನು ಹುಟ್ಟುವ ಪೂರ್ವದಲ್ಲಿ ನಮ್ಮ ಮನೆಯಲ್ಲಿ ಏನು ನಡೆದಿರುತ್ತದೆ ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ, ಅವರು ಎಲ್ಲಾ ಕಡೆಯಲ್ಲವು ಕುಾಲಿ ಕೆಲಸ ಮಾಡುತ್ತಾರೆ. ನನ್ನ ತಾತಾ ಅಂದರೆ 1 ನೇ ಪ್ರತಿವಾದಿಗೆ ಎರಡೂ ಕಾಲುಗಳನ್ನು ಅಪರೇಷನ್ ಮಾಡಿ ತೆಗೆದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯವರು ಚಿಕ್ಕ ವಯಸ್ಸಿನಲ್ಲಿ ಬೆಂಕಿಯಲ್ಲಿ ಕಾಲು ಸುಟ್ಟಿ ಬೆಂಡಾಗಿದ್ದವು ಎಂದು ನುಡಿಯುತ್ತಾರೆ.

ನಾವು ಕಡೂರಿನಲ್ಲಿ ವಾಸವಿದ್ದೆವು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿ ಓಬಳಪ್ಪನವರು ಸಾಯುವವರೆಗು ಕಡೂರಿನಲ್ಲಿ ವಾಸವಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸಹ ಅವರೊಂದಿಗೆ ವಾಸವಿದ್ದೆವು ಎಂದು ನುಡಿಯುತ್ತಾರೆ. ನಿಪಿ.2 ರ ವಂಶವೃಕ್ಷದಲ್ಲಿ ನಾವು ಮತ್ತು 1 ರಿಂದ 3 ನೇ ಪ್ರತಿವಾದಿಯರು ಬೀರೂರಿನಲ್ಲಿ ವಾಸವಿರುವುದಾಗಿ ನಮೂದಿಸಲಾಗಿರುತ್ತದೆ ಎಂದರೆ, ಸಾಕ್ಷಿಯು ಈ ದಾವೆಯನ್ನು ಹಾಕುವ ಕಾಲದಲ್ಲಿ ಬೀರೂರಿನಲ್ಲಿ ವಾಸವಿದ್ದುದ್ದರಿಂದ ನಿಪಿ.2 ರ ವಂಶವೃಕ್ಷದಲ್ಲಿ ಆ ರೀತಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯು ಬೀರೂರಿನಲ್ಲಿಯೂ ವಾಸವಿರುತ್ತಿದ್ದರು, ಕಡೂರಿನಲ್ಲಿಯೂ ವಾಸವಿರುತ್ತಿದ್ದರು. ನಮಗೆ ಎರಡು ಕಡೆಯಲ್ಲೂ ಮನೆ ಇದ್ದವು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಸಾಯಿಸುವವರೆಗು ನಮ್ಮ ಜೊತೆ ವಾಸವಿದ್ದರು. ಈ ದಾವೆಯನ್ನು ಹಾಕುವಾಗಲೂ 1 ನೇ ಪ್ರತಿವಾದಿಯು ನಮ್ಮೊಂದಿಗೆ ವಾಸವಿದ್ದರು. ಸಾಕ್ಷಿ ಮುಂದುವರಿದು

ನಾವು ಅಡಿಕೆ ಕೆಲಸಕ್ಕೆ 06–06 ತಿಂಗಳು ಹೊರಗೆ ಹೋಗುತ್ತಿದ್ದಾಗ 1 ನೇ ಪ್ರತಿವಾದಿಗೆ ವಾಯಸ್ಸಾಗಿದ್ದರಿಂದ ಮನೆಯಲ್ಲಿಯೇ ಬಿಟ್ಟು ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. 1 ಮತ್ತು 3 ನೇ ಪ್ರತಿವಾದಿಯರು ನಮ್ಮೊಂದಿಗೆ ವಾಸವಿದ್ದರು ಎಂದು ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ.

5 ನೇ ಪ್ರತಿವಾದಿಯು ನನ್ನ ಅತ್ತೆಯಾಗಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.4 ರ ಕ್ರಯಪತ್ರದಲ್ಲಿ 5 ನೇ ಪ್ರತಿವಾದಿಯ ಸಹಿಯನ್ನು ಮಾಡಿಸಿರುತ್ತಾರೆ. ಆದ್ದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ನನ್ನ ತಂದೆಯಾದ ಬೊಮಣ್ಣ ಅಂದರೆ 1 ನೇ ವಾದಿಯು ಮಗನಾಗಿದ್ದು, 5 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಮಗಳಾಗಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ 1 ಮತ್ತು 5 ನೇ ವಾದಿಯರು ಮಕ್ಕಳಾಗಿರುತ್ತಾರೆ ಎಂದರೆ, ಸಾಕ್ಷಿಯು 1 ನೇ ವಾದಿಯು ಮಾತ್ರ ಮಗನಾಗಿರುತ್ತಾನೆ ಎಂದು ನುಡಿಯುತ್ತಾರೆ.

2 ನೇ ಪ್ರತಿವಾದಿಯು ಆಂಧ್ರದಲ್ಲಿ ಮರಣ ಹೊಂದಿರುತ್ತಾರೆ ನಾನು ಕೇಳಿ ತಿಳಿದುಕೊಂಡಿರುತ್ತೇನೆ, ಆದರೆ ಅವರು ಯಾರ ಮನೆಯಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಯು ಸಹ ಆಂಧ್ರದಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಸಲ್ಲಿಸಲು ನನ್ನ ತಂದೆ 1 ನೇ ವಾದಿಯು ಮಾಹಿತಿಯನ್ನು ನೀಡಿರುತ್ತಾರೆ. ಈ ದಾವೆಯಲ್ಲಿ 5 ನೇ ಪ್ರತಿವಾದಿಯ ವಿಳಾಸ ಕೊಟ್ಟಪಲ್ಲಿ, ಅನಂತಪುರ ತಾಲ್ಲೂಕು, ಆಂಧ್ರಪ್ರದೇಶ ಎಂದು ನಮೂದಾಗಿರುತ್ತದೆ ಎಂದರೆ, ಸಾಕ್ಷಿಯು 5 ನೇ ಪ್ರತಿವಾದಿಯ ವಿಳಾಸವನ್ನು ನಿಪಿ.4 ರ ಕ್ರಯಪತ್ರದಲ್ಲಿ ನಮೂದಿಸಿದ್ದು, ಅದರಂತೆ ವಾದಪತ್ರದಲ್ಲಿಯೂ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ವಾದಿಯು ತನಗೆ 17 ರಿಂದ 18 ವರ್ಷವಿದ್ದಾಗಲೇ 1 ನೇ ಪ್ರತಿವಾದಿಯನ್ನು ಬಿಟ್ಟು ಬೇರೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಅಲ್ಲಿ–ಇಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಕಡೂರು ಮುನಿಸಿಪಾಲಿಟಿಯಿಂದ

ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಮಂಜೂರು ಮಾಡಿದ ಹಕ್ಕು ಪತ್ರ ನನ್ನ ಬಳಿ ಇರುತ್ತದೆ. ಸಾಕ್ಷಿಗೆ ಹಕ್ಕು ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಿ, ಇದೆಯಾ ಹಕ್ಕು ಪತ್ರ ಎಂದು ಪ್ರಶ್ನಿಸಿದ್ದು, ಸಾಕ್ಷಿ ನೋಡಿ ಒಪ್ಪಿರುತ್ತಾರೆ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯು ಹಣ ಕೊಟ್ಟು ಖರೀದಿಸಿರುವುದಿಲ್ಲ, ಅದನ್ನು ಮುನಿಸಿಪಾಲಿಟಿಯಿಂದ ಮಂಜೂರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಹಾಗಾದರೆ ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಒಟ್ಟು ಕುಟುಂಬದಲ್ಲಿ ಇದ್ದಾಗ ಸದರಿ ದಾವಾ ಸ್ವತ್ತನ್ನು ಕುಟುಂಬಕ್ಕೆ ಮಂಜೂರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

1 ಮತ್ತು 3 ನೇ ಪ್ರತಿವಾದಿಯರು ಬದುಕಿದ್ದಾಗ ನಾವು ಅವರನ್ನು ನೋಡಿಕೊಂಡಿರುವುದಿಲ್ಲ ಮತ್ತು ಅವರ ಯೋಗಕ್ಷೇಮವನ್ನು ವಿಚಾರಿಸಿರುವುದಿಲ್ಲ ಮತ್ತು ಅವರು ಎಂದಿಗೂ ನಮ್ಮ ಜೊತೆ ವಾಸವಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸಾಯುವ ಸಂದರ್ಭದಲ್ಲಿ ಸುಮಾರು 80 ರಿಂದ 85 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿ ರಂಗಮ್ಮನವರು ಮರಣ ಹೊಂದುವಾಗ ಸುಮಾರು 75 ರಿಂದ 80 ವರ್ಷ ವಯಸ್ಸಾಗಿತ್ತು ಎಂದರೆ, ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 1 ರಿಂದ 3 ಮತ್ತು 5 ನೇ ಪ್ರತಿವಾದಿಯರಿಗೆ ಜೀವನೋಪಾಯಕ್ಕೆ ತೊಂದರೆ ಇದ್ದುದ್ದರಿಂದ ದಾವಾ ಷೆಡ್ಯೂಲ್ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ಮತ್ತು 3 ನೇ ಪ್ರತಿವಾದಿಯರು ನಮ್ಮೊಂದಿಗೆ ವಾಸವಿದ್ದು, ನಾವು ತೋಟಕ್ಕೆ ಕೆಲಸಕ್ಕೆ ಹೋಗಿದ್ದಾಗ ಯಾರು ಇಲ್ಲದ ಸಂದರ್ಭದ ನೋಡಿ 4 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು 1976 ರಲ್ಲಿ ಮಂಜೂರು ಮಾಡಿದ ನಂತರ 2017 ರವರೆಗು ದಾವಾ ಷೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದು 1 ನೇ ಪ್ರತಿವಾದಿಗೆ ನೋಟೀಸು ನೀಡುವುದಾಗಲಿ ಅಥವಾ ದಾವಾ ಹಾಕುವುದಾಗಲಿ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಪ್ರತಿವಾದಿಯು ನಮ್ಮೊಂದಿಗೆ ವಾಸವಿದ್ದುದ್ದರಿಂದ ಅವರಿಗೆ ನೋಟೀಸು ನೀಡುವುದಾಗಲಿ ಅಥವಾ ದಾವಾ ಹಾಕುವುದಾಗಲಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ನನಗಾಗಲಿ, ನನ್ನ ತಂದೆಯವರಿಗಾಗಲಿ ಸದರಿ ಸ್ವತ್ತಿನ ಮೇಲೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಮತ್ತು ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯಾದ 1 ನೇ ವಾದಿಯು ಆರೋಗ್ಯವಾಗಿ ಚೆನ್ನಾಗಿ ಓಡಾಡುತ್ತಾರೆ ಎಂದರೆ ಸರಿ. 1 ನೇ ವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ವಿಚಾರಣೆ ಮಾಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ದಾವಾ ಸ್ವತ್ತು 4 ನೇ ಪ್ರತಿವಾದಿ ಖರೀದಿಸಿದ ನಂತರ ಅವರ ವಾರಸುದಾರರು ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತಿನ ಸ್ವಾಧೀನ ನಾವು ಇದ್ದು, ಖಾತೆ ಮಾತ್ರ 4 ನೇ ಪ್ರತಿವಾದಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಸ್ವಾಧೀನ ನಾವೇ ಇರುತ್ತೇವೆ ಎಂದು ನನ್ನ ದಾವೆಯಲ್ಲಿ ತಿಳಿಸಿರುತ್ತೇವೆ. ನಾನು ದಾವೆಯಲ್ಲಿ 4 ನೇ ಪ್ರತಿವಾದಿ ಮತ್ತು ಅವರ ವಾರಸುದಾರರು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯನ್ನು ಹೊರತುಪಡಿಸಿ ನನ್ನ ತಂದೆಗಾಗಲಿ ಅಥವಾ ನನ್ನ ಅಜ್ಜ 1 ನೇ ಪ್ರತಿವಾದಿಗಾಗಲಿ ಬೇರೆ ಆಸ್ತಿ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ನನಗಾಗಲಿ, ಉಳಿದ ವಾದಿಯರಿಗಾಗಲಿ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ 4 ನೇ ಪ್ರತಿವಾದಿಯ ಮನೆಯ ಬಳಿ ಹೋಗಿ ನಾನು ಮತ್ತು ನನ್ನ ತಂದೆ 1 ನೇ ವಾದಿ ಹಾಗೂ ನನ್ನ ತಾಯಿಯವರು ಹೋಗಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ 2 ನೇ ಪ್ರತಿವಾದಿಯು ಕಡೂರು ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ, ಸಾಕ್ಷಿಯು ಅದು ಸುಳ್ಳು ದೂರನ್ನು ನೀಡಿರುತ್ತಾರೆ ಎಂದು ಅದು ಮುಂದುವರೆಯಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಹೇಗಾದರು ಮಾಡಿ ಲಪಟಾಯಿಸಲು ದುರುದ್ದೇಶದಿಂದ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ತನ್ನ ಬಳಿ ಇರುವ ಮೂಲ ಹಕ್ಕು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

C/c. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.